ಈ) *1995Ë96ರಲ್ಲಿ ಈ ವಿವಿಧ ಯೋಜನೆಗಳಿಂದ ನಿಗದಿ ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು? ಹಾಗೂ ನಿಗದಿ ಮಾಡಿದ ಈ ಮನೆಗಳ ಪೈಕಿ ಎಷ್ಟು ಮನೆಗಳನ್ನು 31-12-95ಕ್ಕೆ ಕಟ್ಟಿಸಲಾಗಿದೆ?*

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತಲೂ ಕಡಿಮೆ ಆದಾಯವಿರುವ ಬಡವರು : ಕಡು ಬಡವರಿಗೆ ಹಾಲಿ ಜಾರಿಯಲ್ಲಿರುವ ಯೋಜನೆಗಳಿಂದರೆ ಆಶ್ರಯ, ಡಾ॥ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಗಳು.

ಅ)	*ವಸತಿ ಯೋಜನೆಯ ಹೆಸರುಗಳು*	*ಕಟ್ಟಿಸಬೇಕಾದ ಮನೆಗಳ ಸಂಖ್ಯೆ*	*ನಿಗದಿಪಡಿಸಿದ ಮೊತ್ತ (ಲಕ್ಷಗಳಲ್ಲಿ)*
1)	ಆಶ್ರಯ 1992-93	1,06,000	14228.00
	1994-95	1,50,000*	1254.00
	ಒಟ್ಟು	2,56,000	15482.00
2)	ಡಾ: ಅಂಬೇಡ್ಕರ್	44,634	5695.00
3)	ಇಂದಿರಾ ಆವಾಸ್	14,652	1819.00
ಇ)	*ಯೋಜನೆಯ ಹೆಸರು*	*ಕಟ್ಟಿಸಲಾದ ಮನೆಗಳ ಸಂಖ್ಯೆ*	*ವೆಚ್ಚವಾದ ಮೊತ್ತ (ಲಕ್ಷಗಳಲ್ಲಿ)*
1)	ಆಶ್ರಯ 1992-93 ರಿಂದ 1994-95	76,450	11224.00
2)	ಡಾ: ಅಂಬೇಡ್ಕರ್	30,008	5183.00
3)	ಇಂದಿರಾ ಆವಾಸ್	8,383	2060.00
ಈ)	*ಯೋಜನೆಯ ಹೆಸರು*	*1995-96ನೇ ಸಾಲಿಗೆ ನಿಗದಿಪಡಿಸಿದ ಮನೆಗಳು*	*ಕಟ್ಟಿದ ಮನೆಗಳು*
1)	ಆಶ್ರಯ	60,000	16,495
2)	ಡಾ: ಅಂಬೇಡ್ಕರ್	25,000	110
3)	ಇಂದಿರಾ ಆವಾಸ್	44,129	14,789

* 94-95 ಸಾಲಿನ ಆಶ್ರಯ ಮನೆಗಳ ಆಜ್ಞೆಯನ್ನು ಮಾರ್ಪಾಡು ಮಾಡಿ 1995-96ನೇ ಸಾಲಿಗೆ ವಿಸ್ತರಿಸಿ ವಾರ್ಷಿಕ ಗುರಿಯನ್ನು 6000ಕ್ಕೆ ಮಿತಗೊಳಿಸಿದೆ.

ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯ ಪ್ರಗತಿ

432 - ಶ್ರೀ ಎನ್. ರಾಜಣ್ಣ (ಭಾರತಿ ನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದ ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆ ಯಾವಾಗ ಪ್ರಾರಂಭವಾಗಲು ಉದ್ದೇಶಿಸಲಾಗಿತ್ತು?*

ಅ) ಈ ಕಾರ್ಖಾನೆಗೆ ಬೇಕಾದ ಕಬ್ಬಿಣ ಅದಿರು ಪೂರೈಕೆಯ ವಿಷಯದಲ್ಲಿ ಕೇಂದ್ರ ಸರ್ಕಾರ ಅಂತಿಮ ತೀರ್ಮಾನ ಕೈಗೊಂಡಿದೆಯೇ?

ಇ) ಇಲ್ಲದಿದ್ದರೆ ಈ ಕಾರ್ಖಾನೆಯ ಪ್ರಗತಿ ಕುಂಠಿತವಾಗುವುದನ್ನು ತಪ್ಪಿಸಲು ಸರ್ಕಾರ ಕೇಂದ್ರ ಉಕ್ಕು ಖಾತೆಯೊಂದಿಗೆ ವ್ಯವಹರಿಸಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ವಿವಿಧ ಹಂತದ ಉದ್ದೇಶಿತ ಉತ್ಪಾದನಾ ದಿನಾಂಕ ಈ ಕೆಳಕಂಡಂತಿದೆ:

1.	ಹಾಟ್ ಸ್ಟ್ರೀಪ್ ಮಿಲ್	ಡಿಸೆಂಬರ್ 1996
2.	ಮೊದಲನೇ ಕೋರೆಕ್ಸ್ ಘಟಕ, ಬೇಸಿಕ್ ಆಕ್ಸಿಜನ್ ಘಟಕ ಹಾಗೂ ಕಂಟಿನ್ಯೂಯಸ್ ಕ್ಯಾಸ್ಟಿಂಟ್ ಘಟಕ	ಅಕ್ಟೋಬರ್ 1997
3.	ಪಲ್ಲೆಟೈಸೇಷನ್ ಘಟಕ	ಡಿಸೆಂಬರ್ 1997
4.	ಕೋರೆಕ್ಸ್ ಪ್ಲಾಂಟ್‌ನ 2ನೇ ಘಟಕ	ಮಾರ್ಚ್ 1998

ಆ) ಇಲ್ಲ

ಇ) ಹೌದು

ಈ) ಈ ವಿಷಯವು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

ಎಂ.ಆರ್.ಪಿ.ಎಲ್. ಸಂಸ್ಥೆ ಮೂಡಾಕ್ಕೆ ಕೊಡಬೇಕಾದ ಹಣ

436 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಮಂಗಳೂರು ನಗರ ಪಾಲಿಕೆ ಹಾಗೂ "ಮೂಡಾ"ಕ್ಕೆ ಬರಬೇಕಾಗಿರುವ ಹಣ ಎಷ್ಟು?

ಆ) ಈ ಹಣವನ್ನು ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ರೂ. 18.16 ಕೋಟಿಗಳು ಬರಬೇಕಾಗಿದೆ. ಅದರಲ್ಲಿ ರೂ. 3.00 ಕೋಟಿಗಳನ್ನು ಈಗಾಗಲೇ ಸಂಸ್ಥೆಯು ಪಾವತಿ ಮಾಡಿದೆ. ಈ ಸಂಸ್ಥೆಯಿಂದ ಮಂಗಳೂರು ನಗರ ಪಾಲಿಕೆಗೆ ಯಾವುದೇ ಹಣವು ಬರಬೇಕಾಗಿಲ್ಲ.

ಆ) ಎಂ.ಆರ್.ಪಿ.ಎಲ್. ಸಂಸ್ಥೆಯು ಅಭಿವೃದ್ಧಿ ಶುಲ್ಕ ಮತ್ತು ಜಲಸಂಪನ್ಮೂಲ ಕ್ರೋಢೀಕರಣ ಶುಲ್ಕವನ್ನು ಮನ್ನಾ ಮಾಡಲು ಸರ್ಕಾರಕ್ಕೆ ಮನವಿ ಮಾಡಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸಣ್ಣ ಕೈಗಾರಿಕೆಗಳಿಗೆ ಕೊಡುವ ಸಹಾಯ ಧನ

440 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?